## ಜೆಎಸ್‌ಎಸ್ ಮಹಾವಿದ್ಯಾಪೀಠ
## ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ–301

**27 ಮೇ 2023 * ಶನಿವಾರ * ಸಂಜೆ 6.00**

**ಸ್ಥಳ : 267, ಜೆಎಸ್‌ಎಸ್ ಬಡಾವಣೆ, 2ನೇ ಹಂತ, ಮೈಸೂರು**

---

### ದಿವ್ಯ ಆಶೀರ್ವಾದ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

### ಅಧ್ಯಕ್ಷತೆ

**ಶ್ರೀ ಹೆಚ್.ಎಲ್. ಶಿವಬಸಪ್ಪನವರು**

ಲೇಖಕರು ಹಾಗೂ ನಿವೃತ್ತ ಉಪ ಪೊಲೀಸ್ ಅಧೀಕ್ಷಕರು, ಮೈಸೂರು

### ಉಪನ್ಯಾಸ

**ಕು. ಹೆಚ್.ಎಸ್. ಅಂಬಿಕಾ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಮೈಸೂರು

**ವಿಷಯ : ವಚನಕಾರರ ವಿಶ್ವಪ್ರಜ್ಞೆ**

### ಭಜನೆ

ಶ್ರೀ ಶಿವರಾತ್ರೀಶ್ವರ ಭಜನಾ ಮಂಡಳಿ ಮತ್ತು ಲಲಿತಾದ್ರಿ ಮಹಿಳಾ ಬಳಗ

ಜೆಎಸ್‌ಎಸ್ ಬಡಾವಣೆ, 2ನೇ ಹಂತ, ಮೈಸೂರು

---

### ಪ್ರಾಯೋಜಕರು

**ಶ್ರೀಮತಿ ಎನ್. ಸುಮ ಮತ್ತು ಶ್ರೀ ಬಿ.ಪಿ. ಪ್ರಕಾಶ್**

ಮುಖ್ಯೋಪಾಧ್ಯಾಯರು, ಜೆಎಸ್‌ಎಸ್ ಪ್ರೌಢಶಾಲೆ, ಮೇಟಿಕುಪ್ಪೆ, ಹೆಚ್.ಡಿ. ಕೋಟೆ ತಾ.

ನಂ. 267, ಜೆಎಸ್‌ಎಸ್ ಬಡಾವಣೆ, 2ನೇ ಹಂತ, ಮೈಸೂರು

**ತಮಗೆ ಆದರದ ಸ್ವಾಗತ**

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕವೇ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ, ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿ ಮುಂತಾದ ಸಂಸ್ಥೆಗಳ ಮೂಲಕ ಧರ್ಮ ದಾಸೋಹವನ್ನು ಪ್ರಾರಂಭಿಸಿದ್ದರು. 1986ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪಿಸಿ ಆಧ್ಯಾತ್ಮಿಕ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.5.1996ರಂದು 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಶ್ರೀ ಹೆಚ್.ಎಲ್. ಶಿವಬಸಪ್ಪನವರು** ಗುಂಡ್ಲುಪೇಟೆ ತಾಲ್ಲೂಕು ಹೊರೆಯಾಲದವರು. ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನ ಅರಂಭಿಸಿದರು. ನಂತರ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿ ಉಪ ಪೊಲೀಸ್ ಅಧೀಕ್ಷಕರಾಗಿ ನಿವೃತ್ತರಾದರು. ನಾಟಕಗಳಲ್ಲಿ ಅಭಿನಯಿಸುವ ಆಸಕ್ತಿಯನ್ನು ಹೊಂದಿದ್ದಾರೆ. ಹನಿಗವನ, ವಚನ ವೈಭವ, ನಗುವ ರಂಗೋಲಿ, ಸಾವಿರದ ಗೀತೆ ಕೃತಿಗಳನ್ನು ರಚಿಸಿದ್ದಾರೆ. ಕುವೆಂಪು ಸಾಹಿತ್ಯ ರತ್ನ, ಶರಣಶ್ರೀ ಪ್ರಶಸ್ತಿ, ನೆಹರು ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಕು. ಹೆಚ್.ಎಸ್. ಅಂಬಿಕಾರವರು** ಕನ್ನಡ ಹಾಗೂ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯಗಳ ಎಂಎ ಪದವೀಧರರು. ಪ್ರಸ್ತುತ ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಣ್ಣಕತೆಗಳು, ವಚನಗಳು, ಕವನಗಳನ್ನು ರಚಿಸಿದ್ದಾರೆ. ದಿನಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. ಅನೇಕ ವಿಚಾರಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಬಸವಸಿರಿ ಪ್ರಶಸ್ತಿ ಸೇರಿದಂತೆ ವಿವಿಧ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಶ್ರೀ ಬಿ.ಪಿ. ಪ್ರಕಾಶ್‌ರವರು** ಹೆಚ್.ಡಿ. ಕೋಟೆ ತಾಲ್ಲೂಕು ಯಶವಂತಪುರದವರು. ಧರ್ಮಪತ್ನಿ ಶ್ರೀಮತಿ ಎನ್. ಸುಮರವರು ಗೃಹಿಣಿಯಾಗಿದ್ದಾರೆ. ಪುತ್ರ ಶ್ರೀ ವೈ.ಪಿ. ಸ್ವರೂಪ್‌ರವರು ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ.